## 27

# ಕ್ರಿಸ್ತನಲ್ಲಿರು ಹಸುಮಕ್ಕಳಿಗೆ ಬೆಳೆಯಲು ಬೇಕಾಗಿರುವ ಸಲಹೆಗಳು

## (9:23-30; 22:17-21)

ಯೇಸು ನಿಕೋದೇಮನ ಸಂಗಡ ಮಾತನಾಡಿದಾಗ, ಹುಟ್ಟಿನ ಪರಿವರ್ತನೆಯ ವಿಷಯಕ್ಕೆ ಹೋಲಿಸಿದನು. ಯೆಹೂದ್ಯರ ಹಿರಿ ಸಭೆಯವನಿಗೆ ಯೇಸು, ಹೇಳಿದ್ದೇನೆಂದರೆ "ಒಬ್ಬನು ಹೊಸದಾಗಿ ಹುಟ್ಟದಿದ್ದರೆ, ಅವನು ದೇವರ ರಾಜ್ಯವನ್ನು ಕಾಣಲಾರನು" ಎಂಬುದೆ. (ಯೋಹಾನ 3:3; ಹೋಲಿಸು ಯೋಹಾನ 3:5; 1 ಪೇತ್ರನು 1:22, 23). ಹೊಸ ಒಡಂಬಡಿಕೆಯು ಕ್ರೈಸ್ತರನ್ನು ಕುರಿತು ಕ್ರಿಸ್ತನ ವಿಷಯದಲ್ಲಿ "ಎಳೆ *ಕೂಸುಗಳೆಂದು*" ಕರೆಯುತ್ತದೆ (1 ಕೊರಿಂಥ 3:1; ಇಬ್ರಿಯ 5:13).[1] ಕ್ರೈಸ್ತನಲ್ಲಿ ಎಳೆ ಗೂಸುಗಳಾದ, ಕ್ರೈಸ್ತರು ಹೊಸದಾಗಿ ಹುಟ್ಟುವ ಮಕ್ಕಳು ಹೊಂದಿರುವ ಅಪಾಯಗಳನ್ನು ಮತ್ತು ಆಶ್ಚರ್ಯಗಳನ್ನು ಹೊಂದುವಂತಹ.

"ಹೊಸದಾಗಿ - ಹುಟ್ಟಿದ ತಾರ್ಸದ" ಪೌಲನ ಪ್ರಗತಿಯನ್ನು ನಮ್ಮ ಹಿಂದಿನ ಪಾಠದಲ್ಲಿ ನೋಡಿದ್ದೇವೆ (ಅಪೊಸ್ತಲನಾದ ಎಂಬದ್ದು ಉತ್ತಮವಾದ ಪರಿಚಯ).[2] ಈಗಿನ ವೇದಾಭ್ಯಾಸದಲ್ಲಿ ಅಪೊಸ್ತಲರ ಕೃತ್ಯಗಳು 9ನೇ ಅಧ್ಯಾಯವನ್ನು ಮುಂದುವರಿಸಿ, ಅವನು ಹೊಸ ಕ್ರೈಸ್ತನಾಗಿ ಕಳೆದ ಮೊದಲನೆಯ ದಿವಸಗಳನ್ನು ಧ್ಯಾನಿಸೋಣ.[3] ಈ ಆಲೋಚನೆಗಳಿಂದ "ಕ್ರಿಸ್ತನಲ್ಲಿ ವೃದ್ಧಿಯಾಗದ ಕೂಸುಗಳಿಗೆ ವೃದ್ಧಿಯಾದ ಸಲಹೆಗಳನ್ನು ಸೆಳೆದು ಕೊಳ್ಳೋಣ."

### ನಿಮ್ಮ ಕುಟುಂಬವನ್ನು ಮೆಚ್ಚಿಕೊಳ್ಳಿರಿ (9:19, 20, 26-28, 30)

ನನಗೆ ಒಬ್ಬ ವೈದ್ಯನು ಚಿಕ್ಕ ಮಕ್ಕಳು ಸ್ವಾಭಾವಿಕವಾಗಿ ಮರಣಕ್ಕೆ ತುತ್ತಾಗುವರೆಂದು ತಿಳಿಸಿದ್ದನು. ಇತರೆ ಸೃಷ್ಟಿಗಳಂತೆ, ಮನುಷ್ಯರ ಕೂಸುಗಳಿಗೆ ವಿಶೇಷವಾದ ಪೋಷಣೆಯ ಅಗತ್ಯವಿದೆ. ಆ ಪೋಷಣೆಯನ್ನು ನೀಡಲು ದೇವರು ಕುಟುಂಬವನ್ನು ಅನುಗ್ರಹಿಸಿದ್ದಾನೆ. ಕ್ರೈಸ್ತರ ಬೆಳವಣಿಗೆಯು ಹಸುಕೂಸುಗಳಿಗಿಂತಲೂ ಹೀನವಾಗಿರುತ್ತದೆ. *ಕ್ರಿಸ್ತನಲ್ಲಿರುವ ಹಸುಕೂಸುಗಳನ್ನು* ಉತ್ತೇಜಿಸಿ ಬಲಪಡಿಸಲು, ದೇವರು ಸಭೆಯೆಂಬ - ಇನ್ನೊಂದು ಕುಟುಂಬವನ್ನು ಅನುಗ್ರಹಿಸಿದ್ದಾನೆ.[4] ಆ ಸಭೆಯನ್ನು ಕುರಿತು ಪೌಲನು "ದೇವರ ಮನೆ ಎಂದರೆ ಜೀವಸ್ವರೂಪನಾದ ದೇವರ ಸಭೆ ಎಂದು ಮಾತನಾಡಿರುವನು" (1 ತಿಮೊಥೆ 3:15). ಇನ್ನೊಂದು ತರ್ಜುಮೆಯಲ್ಲಿ "ದೇವರ ಮನೆಯ ಬದಲಾಗಿ" "ದೇವರ *ಕುಟುಂಬ*" ಎಂದು ತಿಳಿಸಲಾಗಿದೆ.[5]

ಕೆಲವು ಮಕ್ಕಳು ತಮ್ಮ ಕುಟುಂಬಗಳನ್ನು ಮೆಚ್ಚಿಕೊಳ್ಳದೆ ಇರುವುದನ್ನು ನಾನು ಗಮನಿಸಿರುವೆನು.[6] ಹಾಗೂ ದೇವರು ಅನುಗ್ರಹಿಸಿರುವ ಆತ್ಮೀಕ ಕುಟುಂಬವನ್ನು ಕೆಲವರು ಮೆಚ್ಚಿಕೊಳ್ಳುವದಿಲ್ಲ. ಹೊಸ ಕ್ರೈಸ್ತರು ಸಭೆಯನ್ನು ಮೆಚ್ಚಿಕೊಂಡು, ದೇವರ ಆಶೀರ್ವಾದಗಳನ್ನು ಆನಂದಿಸಬೇಕು.

ಹೆಚ್ಚಾಗಿ ಸಭೆಯನ್ನು ಮೆಚ್ಚದವರು, ಸೌಲನ ಪರಿವರ್ತನೆಯಿಂದಾದ ಬದಲಾವಣೆಯನ್ನು ಗಮನಿಸಬೇಕು. ಯೇಸು ಈ ಹಿಂಸಕನನ್ನು ಸಂಧಿಸಿದಾಗ ನನ್ನನ್ನು ಏಕೆ ಹಿಂಸೆ ಪಡಿಸುತ್ತಿ ಎಂದಿದ್ದನು, ಸೌಲನೇ, ಸೌಲನೇ *ನನ್ನನ್ನು* ಯಾಕೆ ಹಿಂಸೆಪಡಿಸುತ್ತೀ? (9:4; ಒತ್ತಿ ಹೇಳಿದ್ದು

ನನ್ನದು). ಹಾಗೂ ಅವನು ಯೇಸುವಿನ ಶಿಷ್ಯರನ್ನು ಹಿಂಸಿಸಿದ್ದನು (8:1-3). ಯೇಸುವಿನ ಒಬ್ಬ ಶಿಷ್ಯನನ್ನು ಯಾರದರು ಹಿಂಸಿಸುವುದಾದರೆ, ಅವನು ಯೇಸುವನ್ನೇ ಹಿಂಸಿಸುವವನಾಗಿದ್ದಾನೆ. ಈ ಆಲೋಚನೆಯನ್ನು ನಾನು ಮುಂದುವರಿಸುತ್ತೇನೆ. ಸೌಲನು ಸಭೆಯನ್ನು ನಿರ್ದಿಷ್ಟವಾಗಿ ಹಿಂಸಿಸಿದ್ದನು. ಅಪೊಸ್ತಲರ ಕೃತ್ಯಗಳು 8ರಲ್ಲಿ ನಾವು ಹೀಗೆ ಓದುತ್ತೇವೆ "ಆ ದಿವಸಗಳಲ್ಲಿ ಯೆರುಸಲೇಮಿನಲ್ಲಿದ್ದ *ಸಭೆಗೆ* ದೊಡ್ಡ ಹಿಂಸೆ ಉಂಟಾಯಿತು ... ಆದರೆ ಸೌಲನು *ಸಭೆಯನ್ನು* ಹಾಳುಮಾಡುತ್ತಿದ್ದನು" (ವಚನಗಳು 1, 3; ಒತ್ತಿ ಹೇಳಿದ್ದು ನನ್ನದು). ಪೌಲನು ತನ್ನ ಪತ್ರಿಕೆಯಲ್ಲಿ "ನಾನು ದೇವರ ಸಭೆಯನ್ನು ಹಿಂಸೆಪಡಿಸಿದವನು ಎಂದು ತಿಳಿಸಿರುವನು" (1 ಕೊರಿಂಥ 15:9). "ನಾನು ದೇವರ ಸಭೆಯನ್ನು ಅತ್ಯಂತವಾಗಿ ಹಿಂಸೆಪಡಿಸಿ ಹಾಳು ಮಾಡುತ್ತಿದ್ದೆನು" (ಗಲಾತ್ಯ 1:13). ಫಿಲಿಪ್ಪಿ 3:6ರಲ್ಲಿ ಪೌಲನು ತನ್ನನ್ನು ಕುರಿತು "ನಾನು ಕ್ರೈಸ್ತ ಸಭೆಯ ಹಿಂಸಕನು" ಎಂದಿರುವನು. ಆದಾಗ್ಯು, ಅವನು ಯೇಸುವನ್ನೇ ಹಿಂಸಿಸುತ್ತಿದ್ದನು ಎಂದು ಕರ್ತನು *ತಿಳಿಸಿರುವನು*. ಸಭೆಯನ್ನು ಯೇಸುವಿನಿಂದ ಪ್ರತ್ಯೇಕ ಮಾಡಲಾಗದು ಎಂಬುದೆ ಅಂತಿಮ ನಿರ್ಣಯವಾಗಿದೆ![7]

ದೀಕ್ಷಾಸ್ನಾನ ಹೊಂದಿದ ಸೌಲನ ಸಭೆಗೆ ಸೇರಿಸಲ್ಪಟ್ಟನು[8] ದಮಸ್ಕದ ದೇವ ಜನರ ಅನ್ಯೋನ್ಯತೆಗೆ ಸೇರಿಸಲ್ಪಟ್ಟನು. (ಅವನ ದೀಕ್ಷಾಸ್ನಾನದ ಸಮಯದಲ್ಲಿ ಅನೇಕರು ಸೇರಿ ಬಂದಿರಬಹುದು,[9] ಅವನು ನೀರಿನಿಂದ ಮೇಲೆ ಬರುವಾಗ, ಅವರು ಅವನನ್ನು ಆಲಂಗಿಸಿ: "ಸುಖಾಗಮನವನ್ನು ಬಯಸಿರಬಹುದು!") ಅವನು ದೀಕ್ಷಾಸ್ನಾನ ಪಡೆದ ನಂತರ, "ಮುಂದೆ ಅವನು ದಮಸ್ಕದಲ್ಲಿದ್ದ ಶಿಷ್ಯರ ಸಂಗಡ ಕೆಲವು ದಿವಸ ಇದ್ದು" (ವಚನ 19ಬಿ). "ತಡಮಾಡದೆ ಸಭಾಮಂದಿರಗಳಲ್ಲಿ ಯೇಸುವಿನ ವಿಷಯವಾಗಿ ಆತನೇ ದೇವಕುಮಾರನೆಂದು ಸಾರುವದಕ್ಕೆ ಪ್ರಾರಂಭಮಾಡಿದನು" (ವಚನ 20ಎ). ಕ್ರಿಸ್ತನಲ್ಲಿ ಕೂಸಾಗಿದ್ದಂತಹ ಸೌಲನಿಗೆ ಸಹೋದರರು ನೀಡಿದ ಉತ್ತೇಜನದಿಂದ *ಧೈರ್ಯಗೊಂಡವನಾಗಿ* ಪ್ರಸಂಗಿಸಲು ಪ್ರಾರಂಭಿಸಿದನು. ನಂತರ ದಮಸ್ಕದಲ್ಲಿ ಅವನಿಗೆ ಹಿಂಸೆಯಾದಾಗ ಅವನ ಸಹೋದರ ಸಹೋದರಿಯರು, ಅವನು ತಪ್ಪಿಸಿಕೊಳ್ಳುವಂತೆ *ಸಹಾಯಿಸಿದರು*! (ವಚನ 25).

ಅವನು ತಕ್ಷಣೆವೇ ದಮಸ್ಕವನ್ನು ತೊರೆದು, ಯೆರೂಸಲೇಮಿಗೆ ಹಿಂದಿರುಗಿದನು ಅಲ್ಲಿದ್ದ ಅವನ ಸಹೋದರ ಸಹೋದರಿಯರ ಅನ್ಯೋನ್ಯತೆಯನ್ನು ಬಯಸಿ ಯೆರೂಸಲೇಮಿಗೆ ಬಂದನು. "ಅವನು ಬಂದು ಶಿಷ್ಯರೊಳಗೆ ಸೇರಿಕೊಳ್ಳಬೇಕೆಂದು ಪ್ರಾಯತ್ನಿಸಿದನು" (ವಚನ 26ಎ). KJV ಉತ್ತಮವಾದ ತರ್ಜುಮೆಯನ್ನು ಹೊಂದಿರುತ್ತದೆ, "ಶಿಷ್ಯರ ಸಂಗಡ *ಸೇರಿಕೊಂಡನು*."[10] (ಒತ್ತಿ ಹೇಳಿದ್ದು ನನ್ನದು.) "ಅವರ ಸಂಗಡ" ಅಥವಾ "ಜೊತೆಯಾದನು" ಎಂಬ ಗ್ರೀಕ್ ಪದದ ಅರ್ಥ "ಅಂಟಿಕೊಳ್ಳುವದು ಅಥವಾ ಅವರೊಂದಿಗೆ ಸೇರುವದು"[11] ಯೆರೂಸಲೇಮಿನ ಅನ್ಯೋನ್ಯತೆಯಲ್ಲಿ ಭಾಗವಾಗಲು ಬಯಸಿದನು. ಅದರ ಪ್ರಾಮುಖ್ಯತೆಯನ್ನು ಮೂಲಭಾಷೆಯಲ್ಲಿ ಶಿಷ್ಯರೊಂದಿಗೆ ಸೇರಲು ಪ್ರಯತ್ನಿಸುತ್ತಲೇ ಇದ್ದನು.

ಈ ಹಿಂದೆ ನಾವು ತಿಳಿಸಿರುವಂತೆ, ಕರ್ತನ ಆಲಯವನ್ನು ಸೇರಲು ಸಾಧ್ಯವಿಲ್ಲ, ಆದರೆ ಕರ್ತನೆ ಒಬ್ಬನನ್ನು ಸಭೆಗೆ ಸೇರಿಸುವನು (2:41, 47). ಹೇಗೋ ಸಾರ್ವತ್ರಿಕವಾದ ಕರ್ತನ ದೇಹಕ್ಕೆ ಒಬ್ಬನು ಸೇರಿಕೊಳ್ಳುವಾಗ (ಸೇರಲೇಬೇಕು) "ಅವನು ಸ್ಥಳೀಯ ಸಭೆಗೆ ಸೇರಿಕೊಳ್ಳಬೇಕು." ಪ್ರತಿ ವಿಶ್ವಾಸಿಯು, ಸ್ಥಳೀಯ ಸಭೆಯಲ್ಲಿ ಸಕ್ರೀಯ ಪಾತ್ರವನ್ನು ಹೊಂದಿರಬೇಕು.[12] ಸೌಲನು ಇದನ್ನೇ ಬಯಸಿದನು. ಸೌಲನು ದೀಕ್ಷಾಸ್ನಾನ ಮಾಡಿಸಿಕೊಂಡಾಗ, ಸಭೆಯ ಸದಸ್ಯನಾದನು, ದೀಕ್ಷಾಸ್ನಾನ ಮಾಡಿಸಿಕೊಂಡವರು ಅವನಂತೆಯೇ, ಮಾಡಬೇಕು.[13] ಅವನು ಯೆರೂಸಲೇಮಿಗೆ ಬಂದೊಡನೆಯೇ, ಸಭೆಯ ಸದಸ್ಯನಾಗಲಿಲ್ಲ; ಅವನು ಅವರ ಅನ್ಯೋನ್ಯತೆಯನ್ನು ಬಯಸಿ, ಅವರಲ್ಲಿ ಒಬ್ಬನಾಗಿರುವದಕ್ಕೆ ಆಶಿಸಿದನು.

ಸಾರ್ವತ್ರಿಕ ಸಭೆಯ ಪ್ರಾಮುಖ್ಯತೆಯನ್ನು ನಾವು ತಿಳಿದೆವು. ಆ ಸಭೆಗಾಗಿಯೇ ಕ್ರಿಸ್ತನು

ಪ್ರಾಣತೆತ್ತನು.[14] ಕಣ್ಣಿಗೆ ಕಾಣಿಸುವಂತ ಮತ್ತು ಸ್ಪರ್ಷಿಸಲು ಸಾಧ್ಯವಾಗುವ ಸಭೆ, ಸ್ಥಳೀಯ ಸಭೆಯಾಗಿರುತ್ತದೆ. ಪೌಲನು ತನ್ನ ಪತ್ರಿಕೆಯನ್ನು "ಸಾರ್ವತ್ರಿಕ ಸಭೆಗೆ" ಬರೆಯದೆ, ನಿರ್ದಿಷ್ಟವಾದ ಸ್ಥಳದಲ್ಲಿದ್ದ ಸಭೆಗೆ ಬರೆದನು (1 ಕೊರಿಂಥ 1:2; 2 ಕೊರಿಂಥ 1:1; ಗಲಾತ್ಯ 1:2; 1 ಥೆಸಲೋನಿಕ 1:1; 2 ಥೆಸಲೋನಿಕ 1:1).

ಸ್ಥಳೀಯ ಸಭೆಯ ಕುರಿತಾದ ಪ್ರಾಮುಖ್ಯತೆಯನ್ನು, ಹೊಸ ಒಡಂಬಡಿಕೆಯಲ್ಲಿ ತಿಳಿಸಲಾಗಿದೆ. ಪ್ರಕಟನೆಯಲ್ಲಿ ಕ್ರಿಸ್ತನನ್ನು "ಏಳು ಚಿನ್ನದ ದೀಪಸ್ತಂಭಗಳ ನಡುವೆ ನಡೆಯುವಾತನು" ಎಂದು ತಿಳಿಸಲಾಗಿದೆ, ಅವುಗಳು ಅಸ್ಯಸೀಮೆಯ ಏಳು ಸಭೆಗಳಾಗಿದ್ದವು [ಸಭೀಕರು] (2:1; 1:4, 20) ಸಾಧ್ಯವಾದರೆ ನಾವೆಲ್ಲರು ಹಿರಿಯರ ನಾಯಕತ್ವಕ್ಕೆ ಒಳಪಡಬೇಕು (ಇಬ್ರಿಯ 13:17).[15] ಆದರೆ ಅವರು ಸ್ಥಳೀಯ ಸಭೆಗಳನ್ನು ಮಾತ್ರ ನೋಡಿಕೊಳ್ಳುವರು.[16] ನಾವು ಸ್ಥಳೀಯ ಸಭೆಯ ಸದಸ್ಯರಾಗದ ಹೊರತು, ಹಿರಿಯರಿಗೆ ಒಳಪಡುವದು ಸಾಧ್ಯವಾಗುವದಿಲ್ಲ.

ನಾವು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಬದಲಾಗುವಾಗ ಸೌಲನಂತೆ ನಂಬಿಗಸ್ತರ ಅನ್ಯೋನ್ಯತೆಯ ಸ್ಥಳವನ್ನು ಹುಡುಕಿಕೊಳ್ಳಬೇಕು.[17] ಕ್ರೈಸ್ತರನ್ನು ಸೇರಿಕೊಳ್ಳುವ ಅಭಿಲಾಶೆಯು ನಿಮ್ಮಲ್ಲಿದೆ[18] ಎಂದು ಸಾಧ್ಯವಾದಷ್ಟು ಮಟ್ಟಿಗೆ ಇತರರು ಅರಿತುಕೊಳ್ಳಬೇಕು!

ಮೊದಲನೆಯದಾಗಿ, ಯೆರೂಸಲೇಮಿನ ಕ್ರೈಸ್ತರು ಪೌಲನನ್ನು ಸೇರಿಸಿಕೊಳ್ಳಲು ಹಿಂಜರಿದರು[19]; ಆದರೆ ಬಾರ್ನಬನು ಆಸಕ್ತಿಯಿಂದ ಅವನನ್ನು ಪರಿಚಯಿಸಿದಾಗ, ಎಲ್ಲರೂ ಅವನನ್ನು ಸ್ವೀಕರಿಸಿದರು (ವಚನ 27). ನಂತರ ಅವನು ಕ್ರೈಸ್ತರ ನಡುವೆ ಸ್ವತಂತ್ರವಾಗಿ ತಿರುಗಾಡಿದನು (ವಚನ 28) ಮತ್ತು ಅವನ ಅನ್ಯೋನ್ಯತೆಯಲ್ಲಿ ಆನಂದಿಸಿದನು. ನಂತರ ಅವನು ಯೆರೂಸಲೇಮಿನಿಂದ ತಪ್ಪಿಸಿಕೊಳ್ಳಬೇಕಾದಾಗ, ಅಲ್ಲಿದ್ದ ಕ್ರಿಸ್ತನಲ್ಲಿನ ಸಹೋದರರು, ದಮಸ್ಕದಲ್ಲಿ ಸಹಾಯಿಸಿದಂತೆ, ಇಲ್ಲಿಯೂ ಸಹಾಯಿಸಿದರು (ವಚನಗಳು 29, 30).

ಪೌಲನು ಸಹಜವಾಗಿ ತನ್ನ ಆತ್ಮೀಕ ಕುಟುಂಬವಾದ ಸಭೆಯನ್ನು ಮೆಚ್ಚಿಕೊಂಡನು, ನೀವು ಸಹ ಅವನಂತೆ ಮಾಡುವಿರೆಂದು ನಿರೀಕ್ಷಿಸಿರುವೆನು!

## ಮಾತನಾಡುವದನ್ನು ಕಲಿಯಿರಿ (9:20-22, 27-29; 26:20)

ಕೂಸುಗಳು ಮಾತನಾಡುವದನ್ನು ಕಲಿಯಬೇಕು, ಕೆಲವು ತಡವಾಗಿ ಮಾತನಾಡುತ್ತವೆ. ಇನ್ನೂ ಕೆಲವು ಬೇಗನೆ ಮಾತಾಡುತ್ತೇವೆ. ಅವು ತಮ್ಮ ಮೊದಲ ಮಾತುಗಳನ್ನಾಡುವಾಗ ನಾವು ಎಷ್ಟೊಂದು ಉತ್ಸುಕರಾಗಿರುತ್ತೇವೆ ಹಾಗೂ ಸಂತೋಷಪಡುತ್ತೇವೆ! ಸೌಲನು, "ತಕ್ಷಣವೇ ಮಾತನಾಡಿದಾಗ," ನನ್ನ ಮೊದಲ ಮಗಳಾದ ಸಿಂತಿಯಳ ನೆನಪು ಉಂಟಾಗುತ್ತದೆ. ನಾವು ಆಡಿದ ಮಾತುಗಳನ್ನು ಸಿಂತಿ ಪುನಾರಾವರ್ತಿಸುತ್ತಿದ್ದಳು ("ಹಿಪ್ಪೋಪೊಟಮಸ್," "ಕ್ರೈಸೋಸರಸ್," ಏನೇ ಇರಲಿ) ಬೇರೆಯವರಿಗೆ ಅವಳ ಮಾತನ್ನು ನಾವು ವಿವರಿಸಬೇಕಿತ್ತು, "ಅವಳು ಯಥಾರ್ಥವಾಗಿಯೇ ಮಾತನಾಡುತ್ತಿದ್ದಳು" ಎಂದು ನಾವು ಹೇಳುತ್ತಿದ್ದೆವು; ಏಕೆಂದರೆ ಅವಳು "ಪ್ರಸಂಗಿ ಮಗಳಲ್ಲವೇ, ಮತ್ತು ಆಕೆಯ ತಾಯಿ ಸ್ತ್ರೀಯಲ್ಲವೇ, ಎಂದು ಹೇಳುತ್ತಿದ್ದೇವು."

"ಹೊಸದಾಗಿ ಹುಟ್ಟಿದ" ಸೌಲನು ಕ್ಷಣದಲ್ಲಿಯೇ ಮಾತನಾಡಲು ಆರಂಭಿಸಿದನು. ಯೇಸುವಿನ ಕುರಿತು, ಪೂರ್ತಿ ವ್ಯಾಕ್ಯಾನವನ್ನು ಮಾತನಾಡಿದನು. ವಾರದ ಯಾವ ದಿನದಲ್ಲಿ ಅವನಿಗೆ ದೀಕ್ಷಾಸ್ನಾನವಾಯಿತು ಎಂದು ತಿಳಿದಿರುವದಿಲ್ಲ, ಅವರೆ ಮರುದಿನದ ಸಬ್ಬತ್ ದಿವಸದಲ್ಲಿ ಸಭಾಮಂದಿರದಲ್ಲಿ ಹಾಜರಿದ್ದು "ಆತನೇ ದೇವರ ಮಗನು ಎಂದು ಪ್ರಕಟಿಸಿದನು" (9:20). ಸೌಲನು ಸಭಾಮಂದಿರಕ್ಕೆ ಬಂದಾಗ, ಅಲ್ಲಿದ್ದವರು ಉತ್ಸುಕರಾದರೇ ಹೊರತು ಆಶ್ಚರ್ಯಪಡಲಿಲ್ಲ.[20] ಧರ್ಮಶಾಸ್ತ್ರಕ್ಕೆ ಮೀಸಲಾದ, ಯೆಹೂದ್ಯ ತತ್ವಜ್ಞಾನಿಯನ್ನು ಸಭಾಮಂದಿರದಲ್ಲಿ ಕಾಣುವಂತದ್ದು, ಗೌರವಯುತವಾಗಿತ್ತು. ಪಾಠದ ಸಮಯ ಬಂದಾಗ, ಒಬ್ಬನು ಸೌಲನ ಕಡೆಗೆ ತಿರುಗಿ "ಸಹೋದರನೆ, ಜನರಿಗೆ ಹೇಳತಕ್ಕ ಬುದ್ಧಿ ಮಾತೇನಾದರು ನಿನಗಿದ್ದರೆ, ಹೇಳು!" ಎಂದು ಹೇಳಿತ್ತಿದ್ದನು (ನೋಡಿರಿ 13:15). ಅಲ್ಲಿದ್ದಂಥ ಜನರು ಕ್ರೈಸ್ತರು,

ಯಾವ ರೀತಿಯಲ್ಲಿ ಯೆಹೂದ್ಯರ ಶುದ್ಧ ನಂಬಿಕೆಯನ್ನು ನಾಶಮಾಡುತ್ತಿದ್ದರು. ಎಂಬ ಆಸಕ್ತಿದಾಯಕವಾದ ಸಂದೇಶವನ್ನು ಕೇಳಲು ಹಾತೊರೆಯುತ್ತಿದ್ದರು. ಆದರೆ, ಅವರು ದೇವರ ಮಗನಾದ ಯೇಸುವಿನ ಕುರಿತ ಸಂದೇಶವನ್ನೇ ಕೇಳಿದರು!

ಯೇಸು ದೇವರ ಮಗನು ಎಂದು ಪ್ರಥಮಸಾರಿ ಅಪೊಸ್ತಲರ ಕೃತ್ಯದಲ್ಲಿ ತಿಳಿಸಲಾಯಿತು[21] ದಮಸ್ಕದ ದಾರಿಯಲ್ಲಿ[22] ಯೇಸು "ದೇವರಮಗನಾಗಿ" ಸೌಲನಿಗೆ ಕಾಣಿಸಿಕೊಂಡಿದ್ದನು, ಈ ಸತ್ಯವನ್ನು ಎಲ್ಲರು ಅರಿಯಬೇಕೆಂದು ಪೌಲನು ಆಶಿಸಿದನು. ಅಪೊಸ್ತಲನ ಬರವಣಿಗೆಯಲ್ಲಿ "ದೇವರ ಮಗನು" ಎಂಬ ಹೇಳಿಕೆಯು ಮುಖ್ಯವಾದ ತಾತ್ಪರ್ಯವಾಯಿತು.[23]

ಆ ಸಂದೇಶವು ಅವರಿಗೆ ಆಶ್ಚರ್ಯವುಂಟುಮಾಡಿತು, ಸಂದೇಶಕನ ಕುರಿತಾಗಿ ಅತಿ ಆಶ್ಚರ್ಯವನ್ನುಂಟುಮಾಡಿತು, "ಕೇಳಿದವರೆಲ್ಲರೂ, ಬೆರಗಾಗಿ - ಆ ಹೆಸರು ಹೇಳುವವರನ್ನು ಯೆರೂಸಲೇಮನ್ನೂ ಹಾಳುಮಾಡಿದವನು ಇವನಲ್ಲವೇ ಕ್ರೈಸ್ತರೆನಿಸಿಕೊಳ್ಳುವವರನ್ನು ಬೇಡಿ ಹಾಕಿಸಿ ಮಹಾಯಾಜಕರ ಬಳಿಗೆ ತೆಗೆದುಕೊಂಡು ಹೋಗ ಬೇಕೆಂದೇ ಇಲ್ಲಿಗೆ ಬಂದನಲ್ಲವೇ ಎಂದು ಮಾತಾಡಿಕೊಂಡರು?" (9:21).

ದಿನಗಳು ಕಳೆದಂತೆ, ಸೌಲನು "ಯೇಸುವಿನ ನಾಮದಲ್ಲಿ ಧೈರ್ಯವಾಗಿ" ಮಾತನಾಡಲು ಆರಂಭಿಸಿದನು (9:27). "ಸೌಲನು ಇನ್ನೂ ಅರ್ಥಿಕ ಸಾಮರ್ಥ್ಯವುಳ್ಳವನಾಗಿ ಯೇಸುವೇ ಕ್ರಿಸ್ತನೆಂದು ಸಿದ್ಧಾಂತಪಡಿಸಿ ದಮಸ್ಕದಲ್ಲಿದ್ದ ಯೆಹೂದ್ಯರನ್ನು ಉತ್ತರವಿಲ್ಲದವರನ್ನಾಗಿ ಮಾಡಿದನು" (9:22). "ಸಿದ್ಧಾಂತ" ಎಂಬುದು ಗ್ರೀಕ್ ಭಾಷೆಯ ಜೋಡಿ ಪದವಾಗಿದ್ದು, ಅಕ್ಷರಶಃ "ಒಟ್ಟಾಗಿ ಸೇರಿಸು," "ಐಖ್ಯತೆಗೆನಡಿಸು" ಒಟ್ಟಾಗಿ ಹೆಣಿಗೆ ಮಾಡು ಎಂಬ ಅರ್ಥವಾಗಿದೆ. ಸೌಲನು ಹಳೆ ಒಡಂಬಡಿಕೆಯ ಮೆಸ್ಸೀಯನ ಕುರಿತು ಮಾತನಾಡಿ, ನಂತರ ಯೇಸುವಿನ ಜೀವಿತದ[24] ಕುರಿತು ಹೋಲಿಸಿದನು. ಇವೆರಡನ್ನೂ "ಒಟ್ಟಾಗಿ ಹೆಣೆದು" ಯೇಸುವೇ ಮೆಸ್ಸೀಯನೆಂದು ಭಲವಾಗಿ ಸಿಂದ್ಧಾಂತ ಪಡಿಸಿದನು!

ಸೌಲನು, ಯೇಸುವನ್ನು ಮೆಸ್ಸೀಯನೆಂದು ಹೆಚ್ಚಾಗಿ ಪ್ರಕಟಿಸಿದನು. ಸೌಲನು ತಾನು ಬದಲಾದಂತೆ, ಯೆಹೂದ್ಯರು ಸಹ ಬದಲಾಗಬೇಕೆಂದು ಅಪೇಕ್ಷಿಸಿದನು ಅವನು ದಮಸ್ಕದವರಿಗೆ ... ಮನಸಾಂತರಪಟ್ಟು ದೇವರ ಕಡೆಗೆ *ತಿರುಗಿಕೊಳ್ಳಿರಿ* ಎಂದು ಹೇಳಿ, ಮನಸಾಂತರಕ್ಕೆ ಯೋಗ್ಯವಾದ ಕೃತ್ಯಗಳನ್ನು ಮಾಡಬೇಕೆಂದು ಸಾರಿದನು (26:20; ಒತ್ತಿ ಹೇಳಿದ್ದು ನನ್ನದು).

ಸೌಲನು ದಮಸ್ಕದಲ್ಲಿ, ಸೇವೆಗಾಗಿ ಅನೇಕ ದಿವಸಗಳನ್ನು ಮೀಸಲ್ಪಟ್ಟಿದ್ದನು. ಅವನು ತನ್ನ ಸುವಾರ್ತಾಸೇವೆಯ ನಿಮಿತ್ತವಾಗಿ ಯೆರೂಸಲೇಮಿಗೆ ಹೋದಾಗ, ಅಲ್ಲಿ "ಕರ್ತನ ಹೆಸರಿನಲ್ಲಿ ಧೈರ್ಯದಿಂದ ಬೋಧಿಸಿದನು ಮತ್ತು ಗ್ರೀಕ್ ಭಾಷೆಯನ್ನಾಡುವ ಯೆಹೂದ್ಯರ ಸಂಗಡ ಮಾತಾಡಿ ತರ್ಕಿಸುತ್ತಿದ್ದನು [ಸಭಾಮಂದಿರದಲ್ಲಿ[25]]" (9:28, 29). ಅವನ ಪ್ರಯಾಣಗಳಲ್ಲಿ, ಮೊದಲು ಸಭಾಮಂದಿರವನ್ನು ಸಂಧಿಸುವ ಕ್ರಮವನ್ನಿಟ್ಟುಕೊಂಡಿದ್ದನು[26] - "ಯೇಸು ... ದೇವರ ಮಗನೆಂಬುದೇ ಅವನ ಮುಖ್ಯ ಸಂದೇಶವಾಗಿತ್ತು" (9:20; ನೋಡಿರಿ 1 ಕೊರಿಂಥ 2:2; ಗಲಾತ್ಯ 6:14).

ಪ್ರತಿಯೊಬ್ಬ ಹೊಸ ಕ್ರೈಸ್ತನು, ಪೌಲನನ್ನು ಮಾದರಿಯಾಗಿಟ್ಟುಕೊಂಡು, ಅವನನ್ನು ಅನುಸರಿಸಲು ಸಾಧ್ಯವಿದೆ ಮೊದಲನೆಯದಾಗಿ, ಅವನು ಮಾತನಾಡಲು ಆರಂಭಿಸಿದನು. ಅವನನ್ನು ಮೌನವಾಗಿರಿಸಲು, ಯಾರಿಂದಲೂ ಸಾಧ್ಯವಾಗಲಿಲ್ಲ! ಎರಡನೆಯದಾಗಿ, ಅವನಿರುವ ಸ್ಥಳದಲ್ಲಿಯೇ ಮಾತನಾಡಲು ಪ್ರಾರಂಭಿಸಿದನು. ನಾವು ಕ್ರೈಸ್ತರಾಗುವದಕ್ಕಿಂತ ಮೊದಲು ಪರಿಚಯವಿದ್ದ ಜನರೊಂದಿಗೆ ಮಾತನಾಡುವದು ಕಷ್ಟವಾಗುತ್ತದೆ. ಆದರೆ ಸೌಲನು ತನ್ನ ಪರಿಚಯಸ್ಥರೊಂದಿಗೆ ಮಾತನಾಡಿದನು. ಮೂರನೆಯದಾಗಿ, ಅವನು ಅರಿತಿರುವದನ್ನೇ ಸಾರಿದನು. ಒಂದು ವೇಳೆ ಅವನು ಸ್ಫೂರ್ತಿಯಿಂದ ಮಾತನಾಡಿರಬಹುದು; ಅಥವಾ ಇಲ್ಲದೇ ಇರಬಹುದು.[27] ಏನೇ ಇದ್ದರೂ ಹೇಳುವದಕ್ಕೆ ಒಂದು ಸಂದೇಶವನ್ನು ಹೊಂದಿದ್ದನು!

ನಾಲ್ಕನೆಯದಾಗಿ, ಯೇಸು ಅವನಿಗೆ ಮಾಡಿದ ಕಾರ್ಯಗಳನ್ನು ಮತ್ತು *ಯೇಸುವನ್ನೇ* ಸಂದೇಶದ ಮುಖ್ಯ ಪ್ರಸ್ತಾಪವನ್ನಾಗಿ ಮಾಡಿಕೊಂಡಿದ್ದನು!

ಮುಂದಿನ ವಿಷಯಗಳನ್ನು ಗಮನಾರ್ಹ ಮಾಡಿಕೊಳ್ಳೋಣ: (1) ಹೊಸಬನಾದ ಪ್ರತಿ ಕ್ರೈಸ್ತನು, ತಕ್ಷಣವೇ ಕ್ರೈಸ್ತನನ್ನು ಪ್ರಚುರಪಡಿಸಲು ಪ್ರಯತ್ನಿಸಬೇಕು. "ಮೌನವಾಗಿರುವ ಶಿಷ್ಯನು, ಗೊಂದಲಕೊಳ್ಳಗಾಗಿರುತ್ತಾನೆ."[28] (2) ಪ್ರತಿ ಹೊಸ ಕ್ರೈಸ್ತನು "ತಾನಿರುವಲ್ಲಿಯೇ" ಯೇಸುವನ್ನು ತಿಳಿಸಲು ಆರಂಭಿಸಬೇಕು. ಸೌಲನ ಪ್ರಸಂಗದಲ್ಲಿ ಜನರು ಆಶ್ಚರ್ಯ ಪಟ್ಟಂತೆ, ಇವರ ವಿಷಯದಲ್ಲಿ ಜನರು ಆಶ್ಚರ್ಯಪಡಬೇಕು (ಹೋಲಿಸು 1 ಪೇತ್ರನು 4:4). (3) ಪ್ರತಿ ಹೊಸ ಕ್ರೈಸ್ತನು ತಾನು ಅರಿತಿರುವದನ್ನು ಇತರರಿಗೆ ತಿಳಿಸಲೇಬೇಕು. ಅವನಿಗೆ ಹೆಚ್ಚು ತಿಳಿಯದಿದ್ದರೂ, ಅವನು ಏನನ್ನು ನಂಬಿರುವನು ಮತ್ತು ಏಕೆ ಕ್ರೈಸ್ತನಾದನು ಎಂಬದನ್ನು ತಿಳಿಸಬೇಕು. ಅವನು ಮೊದಲು ಅದನ್ನು ತಿಳಿಸಿ, ನಂತರ ಕಲಿಯಲು ಪ್ರಯತ್ನಿಸಬೇಕು. (4) ಪ್ರತಿ ಹೊಸ ಕ್ರೈಸ್ತನು ಯೇಸುವನ್ನು ತನ್ನ ಸಂದೇಶದ ಮುಖ್ಯ ಪ್ರಸ್ತಾಪವನ್ನಾಗಿ ಮಾಡಿಕೊಳ್ಳಬೇಕು.

ಅನೇಕ ಸಾರಿ, ಹೊಸ ಕ್ರೈಸ್ತರಿಂದ ಬಹಳ ಅಲ್ಪವಾದದ್ದನ್ನೇ ಬಯಸುತ್ತೇವೆ ನಮ್ಮ ಬಯಕೆಗೆ ಅನುಗುಣವಾಗಿ ಅವರು ಜೀವಿಸಿದರೆ, ಅಷ್ಟರಲ್ಲೆ ಸಂತೃಪ್ತರಾಗುತ್ತೇವೆ! ಕೂಸುಗಳಿಂದ ಹೆಚ್ಚಾದದ್ದನ್ನು ನಾವು ಬಯಸುವದಿಲ್ಲವೇ? ಅವರು ಬೆಳೆಯಬೇಕು, ನಡೆಯಬೇಕು, ಮತ್ತು ಮಾತನಾಡಬೇಕು ಎಂದು ಬಯಸುತ್ತೇವೆ. ಅವರು ಅಭಿವೃದ್ಧಿಯಾಗುವಂತೆ ಅವರನ್ನು ಪ್ರೋತ್ಸಾಯಿಸುತ್ತೇವೆ. ಹೊಸ ಕ್ರೈಸ್ತರಲ್ಲಿ ಅವರು ಅಭಿವೃದ್ಧಿಯಾಗುವಂತೆ ಅವರನ್ನೂ ಪ್ರೋತ್ಸಾಯಿಸುತ್ತೇವೆ. ಹೊಸ ಕ್ರೈಸ್ತರಲ್ಲಿರುವ ಯೇಸುವನ್ನು ಅವರು *ಬೇಗನೆ* ಪ್ರಕಟಿಸುವಂತೆ, ಅವರನ್ನು ನಾವುಗಳು ಉತ್ತೇಜಿಸೋಣ.

## ನಿನ್ನ ಆಹಾರವನ್ನು ಆಸ್ವಾದಿಸು (9:22)

ಕ್ರಿಸ್ತನಲ್ಲಿರುವ ಪ್ರತಿಯೊಂದು ಕೂಸುಗಳು ನಿಯಮಗಳ ಪ್ರಕಾರ ವೃದ್ಧಿ ಹೊಂದುವಂತೆ ಪ್ರೋತ್ಸಾಯಿಸಬೇಕು. "ನೀವು ಕೃಪೆಯಲ್ಲಿಯೂ ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸುಕ್ರಿಸ್ತನ ವಿಷಯವಾದ ಜ್ಞಾನದಲ್ಲಿಯೂ ಅಭಿವೃದ್ಧಿಯನ್ನು ಹೊಂದುತ್ತಾ ಇರಿ" (2 ಪೇತ್ರನು 3:18). ವೃದ್ಧಿಯು, ನಿಧಾನವಾಗಿಯೂ ಅಥವಾ ವೇಗವಾಗಿಯೂ ಆಗುತ್ತಿರುವುದು ಮುಖ್ಯವಲ್ಲ, ಆದರೆ ವೃದ್ಧಿಯಾಗುತ್ತಿರುವದು ಪ್ರಾಮುಖ್ಯವಾಗಿದೆ. ನೂತನವಾಗಿ ಹುಟ್ಟಿದ ಕೂಸು ವೃದ್ಧಿಯಾಗದಿದ್ದರೆ, ಅದು ಸಾಯುತ್ತದೆ.

ಅಪೊಸ್ತಲರ ಕೃತ್ಯಗಳು 9:22 ತಿಳುಸುವಂತೆ "*ಸೌಲನು ಇನ್ನೂ ಅಧಿಕ ಸಾಮರ್ಥ್ಯವುಳ್ಳವನಾಗಿ* ಯೇಸುವೇ ಕ್ರಿಸ್ತನೆಂದು ಸಿದ್ಧಾಂತಪಡಿಸಿ ದಸಮ್ಕಸದಲ್ಲಿದ ಯೆಹೂದ್ಯರನ್ನು ಉತ್ತರವಿಲ್ಲದವರಾಗ ಮಾಡಿದನು" (ಒತ್ತಿ ಹೇಳಿದ್ದು ನನ್ನದು). "ಸಾಮರ್ಥ್ಯದಲ್ಲಿ ವೃದ್ಧಿಯಾದನು" ವ್ಯಾಖ್ಯಾನವನ್ನು ವಚನ 19ಕ್ಕೆ ಹೋಲಿಸುವಾಗ "ಅವನು ಆಹಾರವನ್ನು ತೆಗೆದುಕೊಂಡು ಬಲಗೊಂಡನು" ಎಂಬುದಾಗಿದೆ; ನಂತರ ಆತ್ಮದಲ್ಲಿ ಭಲಗೊಂಡನು. ಅವನಿಗೆ ವಿರೋಧವು ಹೆಚ್ಚಾದಂತೆ, ಅವನ ಭಲವೂ ವೃದ್ಧಿಯಾಯಿತು. NIVಯಲ್ಲಿ "ಸೌಲನು ಹೆಚ್ಚೆಚ್ಚಾಗಿ ಭಲಗೊಂಡು ಯೆಹೂದ್ಯರಲ್ಲಿ ಗೊಂದಲ ಮಾಡಿದನು" ಎಂಬುದಾಗಿದೆ.

ಸೌಲನು ಯಾವ ವಿಧದಲ್ಲಿ ಭಲಗೊಂಡನೆಂದು ಲೂಕನು ತಿಳಿಸಿರುವದಿಲ್ಲ, ಆದರೆ ಅವನು ಅಪೊಸ್ತಲರಿಗಿದ್ದಂಥ ಯೇಸುವಿನ *ಜ್ಞಾನದಲ್ಲಿ* ವೃದ್ಧಿಯಾದನು ಎಂದು ಸಹಜವಾಗಿ ತಿಳಿಯುತ್ತೇವೆ.[29] ಪೇತ್ರನು ಬರೆದು, "ಹಸು ಮಕ್ಕಳಂತೆ *ಪಾರಮಾರ್ಥಿಕವಾದ* ಶುದ್ಧ ಹಾಲನ್ನು ಬಯಸಿರಿ ಆದರಿಂದ ಬೆಳೆಯುತ್ತಾ ರಕ್ಷಣೆಯನ್ನು ಹೊಂದುವಿರಿ" (1 ಪೇತ್ರನು 2:2; ಒತ್ತಿ ಹೇಳಿದ್ದು ನನ್ನದು; ಇಬ್ರಿಯ 5:12-14). ಸೌಲನು ಯೇಸುವಿನ ಜ್ಞಾನವನ್ನು ಎರಡು ವಿಧವಾದ ದಾರಿಗಳಲ್ಲಿ ಪಡೆದನು.

ಸೌಲನು ಕರ್ತನಿಂದ ನೇರವಾದ *ಪ್ರಕಟನೆಯನ್ನು* ಹೊಂದಿದ್ದು ಬಹು ಪ್ರಾಮುಖ್ಯವಾದ ವಿಧವಾಗಿದೆ. ನಂತರ ಪೌಲನು ಬರೆದು,

> ಸಹೋದರರೇ, ನಾನು ಸಾರಿದ ಸುವಾರ್ತೆಯಂತೂ ಮನುಷ್ಯ ಕಲ್ಪನೆಯಲ್ಲವೆಂದು ನಿಮಗೆ ತಿಳಿಯಪಡಿಸುತ್ತೇನೆ. ನಾನು ಅದನ್ನು ಮನುಷ್ಯನಿಂದ ಹೊಂದಲಿಲ್ಲ, ನನಗೆ ಯಾರೂ ಉಪದೇಶಿಸಲಿಲ್ಲ, ಯೇಸು ಕ್ರಿಸ್ತನೇ ಅದನ್ನು ನನಗೆ ಪ್ರಕಟಿಸಿದನು ... ಯೆರೂಸಲೇಮಿಗೆ ನನಗಿಂತ ಮುಂಚೆ ಅಪೊಸ್ತಲರಾಗಿದ್ದವರ ಬಳಿಗೂ ಹೋಗದೆ ಅರಬಸ್ಥಾನಕ್ಕೆ ಹೋಗಿ ತಿರಿಗಿ ದಮಸ್ಕಕ್ಕೆ ಬಂದೆನು (ಗಲಾತ್ಯ 1:11, 12, 17).[30]

ದಮಸ್ಕದ ದಾರಿಯಲ್ಲಿ, ಸೌಲನು ಯೇಸುವೇ ಮೆಸ್ಸೀಯನು ಮತ್ತು ಜೀವದಿಂದ ಎದ್ದವನು, ಎಂಬ ಪ್ರಕಟನೆಯನ್ನೂ ಹಾಗು ಅತನ ಸೇವೆಯ ವಿಷಯವಾದ ಪರಲೋಕದ ಪ್ರಕಟನೆಯನ್ನೂ ಹೊಂದಿದನು. ಅವನ ಮುಂದೆ ಪಡೆದ ವಿಶೇಷ ಪ್ರಕಟನೆಯನ್ನು ಎಲ್ಲಿ ಮತ್ತು ಹೇಗೆ ಪಡೆದನೆಂದು ನಾವು ಅರಿಯೆವು. ಸಾಧ್ಯತೆಯ ಒಂದು ಯೋಚನೆ ಏನೆಂದರೆ, "ನಾನು ಅರಬಸ್ಥಾನಕ್ಕೆ ಹೋದೆನು" ಎಂದು ಹೇಳಿರುವನು (ಗಲಾತ್ಯ 1:17). ಅರಬಸ್ಥಾನವು ದಮಸ್ಕದ ಮರುಭೂಮಿಯ ಪೂರ್ವದಲ್ಲಿದ್ದು, ಅದು ಯೂಫ್ರೆಟಿಸ್ ನದಿ ಹಾಗೂ ಕೆಲವು ಸಮುದ್ರದವರೆಗೂ ಹಬ್ಬಿಕೊಂಡಿತ್ತು.[31] ಅವನ ಸೇವೆಯ ಪ್ರಾರಂಭದ ದಿವಸಗಳಲ್ಲಿ ದಮಸ್ಕಕ್ಕೆ[32] ಹಿಂದಿರುಗುವ ಮೊದಲು, ಅವನು "ಆತ್ಮೀಕ ಬೆಳವಣಿಗೆಗಾಗಿ" ಅರಬಸ್ಥಾನಕ್ಕೆ ಹೋಗಿದ್ದನು ಎಂಬುದು ಕೆಲವು ವಿವರಣೆಕಾರರ ವಿವರಣೆಯಾಗಿದೆ (ಭಕ್ತಿಸಂಜೀವನಕ್ಕೆ)[33] ಇನ್ನಿತರರು, ಅವನು ಪ್ರಸಂಗ ಮಾಡುವ ಉದ್ದೇಶದಿಂದ ಅಲ್ಲಿಗೆ ಹೋಗಿದ್ದನು ಎಂದು ತಿಳಿದಿದ್ದರು (ದಮಸ್ಕದಲ್ಲಿ ಮಾಡಿದಂತೆ) ಸೌಲನು ಅರಬಸ್ಥಾನಕ್ಕೆ ಹೋದ ಕಾರಣವನ್ನು ಸತ್ಯವೇದವು ತಿಳಿಸದೆ ಇದ್ದರೂ, ನಿರ್ದಿಷ್ಟವಾದ ಕಾರಣವನ್ನು ತಿಳಿಸಲು ನಮಗೆ ಅಸಾಧ್ಯ. ಒಂದು ವೇಳೆ ಅವನು 2 ಕೊರಿಂಥ 12:1ರಲ್ಲಿ ತಿಳಿಸಿರುವಂತೆ, ಆ ಸಮಯದಲ್ಲಿ "ದರ್ಶನಗಳನ್ನು ಹಾಗು ರಹಸ್ಯಗಳನ್ನು" ತಿಳಿದಿರಬಹುದು.

ಎಲ್ಲಿಯೇ ಇರಬಹುದು ಮತ್ತು ಹೇಗೆ ಇರಬಹುದು ಸೌಲನು ಕರ್ತನಿಂದ ಪ್ರಕಟನೆ ಸ್ವೀಕರಿಸಿದಾಗ, ಅದು ಯೇಸುವಿನ ಉಪದೇಶ ಹಾಗೂ ಆತನ ಜೀವನ ಚರಿತ್ರೆಯನ್ನು ಒಳಗೊಂಡಿತ್ತು. ಅವನು ನಂತರ ಬರೆದು, "ನಾನು ನಿಮಗೆ ತಿಳಿಸಿಕೊಟ್ಟ ಉಪದೇಶವನ್ನು ಕರ್ತನಿಂದ ಹೊಂದಿದೆನು. ಅದೇನೆಂದರೆ ಕರ್ತನಾದ ಯೇಸು ತಾನು ಹಿಡಿದುಕೊಡಲ್ಪಟ್ಟ ರಾತ್ರಿಯಲ್ಲಿ ರೊಟ್ಟಿಯನ್ನು ತೆಗೆದುಕೊಂಡು ದೇವ ಸ್ತೋತ್ರ ಮಾಡಿದನು" (1 ಕೊರಿಂಥ 11:23; ಒತ್ತಿ ಹೇಳಿದ್ದು ನನ್ನದು).[34] ಯೇಸುವಿನಿಂದ ಕರೆಯಲ್ಪಟ್ಟ ಹನ್ನೆರಡು ಅಪೊಸ್ತಲರು, ಮೊದಲು ಯೇಸುವಿನಿಂದ ಬೋಧಿಸಲ್ಪಟ್ಟು ನಂತರ ಅವರು ಯೇಸುವಿನ ಪುನರುತ್ಥಾನಕ್ಕೆ ಸಾಕ್ಷಿಯಾದರು (ಅಪೊಸ್ತಲರ ಕೃತ್ಯಗಳು 1:21, 22). ಆದರೆ ಪೌಲನು ತಲೆಕೆಳಗಾದ ಅನುಭವವನ್ನು ಹೊಂದಿದನು. ಮೊದಲು ಅವನು ಸಾಕ್ಷಿಯಾದನು ನಂತರ ಯೇಸುವಿನಿಂದ ಬೋಧಿಸಲ್ಪಟ್ಟನು.[35]

ಎರಡನೆಯದಾಗಿ, ಪೌಲನು ಇತರರಿಂದ ಕಲಿಯುವ ಮೂಲಕ, ತನ್ನ ಜ್ಞಾನವನ್ನು ವೃದ್ಧಿಮಾಡಿಕೊಂಡನು. ಗಲಾತ್ಯದವರಿಗೆ ಬರೆಯುವಾಗ, ಅವನು ತಕ್ಷಣವೇ ಅಪೊಸ್ತಲರನ್ನು ಸಂಧಿಸಲಿಲ್ಲ ಎಂದು ಹೇಳಿದರೂ, "ಮೂರು ವರುಷಗಳ ನಂತರ (ಪರಿವರ್ತನೆಗೊಂಡ ಮೂರು ವರುಷಗಳ ನಂತರ) ಕೇಫನ ಪರಿಚಿತಿಯನ್ನು ಮಾಡಿಕೊಳ್ಳಬೇಕೆಂದು [ಪೇತ್ರನ ಇನ್ನೊಂದು ಹೆಸರು[36]] ಯೆರೂಸಲೇಮಿಗೆ ಹೋಗಿ ಅವನ ಬಳಿಯಲ್ಲಿ ಹದಿನೈದು ದಿವಸ ಇದ್ದೆನು ಎಂದು ಹೇಳಿದ ಮಾತನ್ನು ಗಮನಿಸಿರಿ (ಗಲಾತ್ಯ 1:18). ಪೇತ್ರ ಮತ್ತು ಸೌಲರು, ತಮ್ಮಲ್ಲಿದ್ದ ಯೇಸುವಿನ ಅನುಭವವನ್ನು ಹಂಚಿಕೊಳ್ಳುವ ಸಂದರ್ಭದಲ್ಲಿ, ನೀವು ಸಹ ಪಾಲುಗಾರರಾಗಲೂ ಬಯಸುವದಿಲ್ಲವೇ? ಪೇತ್ರನು ಯೇಸುವನ್ನು ಅಲ್ಲಗಳೆದ ಬಗ್ಗೆ

ಹೇಳುವಾಗ ಅವರ ಕಣ್ಣೀರನ್ನು ನೋಡುವದಿಲ್ಲವೇ, ಮತ್ತು ಸೌಲನು ದೇವ ಜನರನ್ನು ಹಿಂಸಿಸಿದ ಬಗ್ಗೆ ಹೇಳುವಾಗ ಅವರಲ್ಲಿ ದುಃಖ ಉಂಟಾಗಲಿಲ್ಲವೇ.

ಕ್ರಿಸ್ತನಲ್ಲಿರುವ ಕೂಸು ಭಲದಲ್ಲಿ ವೃದ್ಧಿಯಾಗಬೇಕಾದರೆ, ಅದು ದೇವರ ವಾಕ್ಯದ ಪೋಷಣೆಯನ್ನು ಪಡೆಯಬೇಕು. ಸೌಲನಿಗೆ ಉಂಟಾದ ಪ್ರಕಟನೆಯನ್ನು ಮತ್ತು ಮಾಹಿತಿಯನ್ನು ಸತ್ಯವೇದವು ನಮಗೂ ನೀಡುತ್ತದೆ. ನಂತರ ಅವನು ತಿಮೊಥೆಯನಿಗೆ, "ಆ ಗ್ರಂಥಗಳು ಕ್ರಿಸ್ತ ಯೇಸುವಿನಲ್ಲಿರುವ ನಂಬಿಕೆಯ ಮೂಲಕ ರಕ್ಷಣೆಹೊಂದಿಸುವ ಜ್ಞಾನವನ್ನು ಕೊಡುವದಕ್ಕೆ ಶಕ್ತಿಯಾಗಿವೆ" (2 ತಿಮೊಥೆ 3:15). ಅವನು ದೇವರ ವಾಕ್ಯವನ್ನು ಒಂದು ಸಾಧನಕ್ಕೆ ಹೋಲಿಸಿ, ಯೌವನಸ್ಥ ಪ್ರಸಂಗಿಗಳು ಆ ಸಾಧನವನ್ನು ಬಳಸಬೇಕು ಎಂದು ಸವಾಲು ನೀಡಿದನು. "ನೀನು ದೇವರ ದೃಷ್ಟಿಗೆ ಯೋಗ್ಯನಾಗಿ ಕಾಣಿಸಿಕೊಳ್ಳುವದಕ್ಕೆ ಪ್ರಾಯಾಸಪಡು, ಅವಮಾನಕ್ಕೆ ಗುರಿಯಾಗದ ಕೆಲಸದವನು ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವವನು ಆಗಿರು" ಅಂದನು (2 ತಿಮೊಥೆ 2:15).

ದೇವರ ವಾಕ್ಯವನ್ನು ಕಲಿಯಿರಿ, ಕಲಿಯಿರಿ, ಕಲಿಯಿರಿ, ಬೆರೇಯಾದವರ ಐಶ್ವರ್ಯವುಳ್ಳ ಜ್ಞಾನವನ್ನು ಪಡೆದುಕೊಳ್ಳಿರಿ ಎಂಬುದು ನೂತನ ಕ್ರೈಸ್ತರಿಗೆ ಯೋಗ್ಯವಾದ ಮಾರ್ಗದರ್ಶನವಾಗಿರುತ್ತದೆ, "ಅವರು ಪ್ರತಿದಿನವು ಶಾಸ್ತ್ರಗ್ರಂಥಗಳನ್ನು ಶೋಧಿಸುತ್ತಿದ್ದರು" (17:11). ಸ್ವಂತ ಸತ್ಯವೇದವನ್ನು ಅಭ್ಯಸಿಸಿರಿ: ಅದಕ್ಕಾಗಿ ನಿಗದಿತ ಸಮಯವನ್ನು ಮಾಡಿಕೊಳ್ಳಿರಿ ಕಲಿಯುವದಕ್ಕೆ ಸಕಲ ಅವಕಾಶಗಳನ್ನು ಸದುಪಯೋಗಮಾಡಿಕೊಳ್ಳಿರಿ. ಕ್ರೈಸ್ತರಾದ ನೀವು ದೇವರ ಕುಟುಂಬದ ಒಂದು ಭಾಗವಾಗಿರುವಿರಿ. ಕ್ರಿಸ್ತನಲ್ಲಿರುವ ನಿಮ್ಮ ಸಹೋದರ ಸಹೋದರಿಯರ ಸಂಗಡ ನಂಬಿಗಸ್ತರಾಗಿ ವೇದಾಭ್ಯಾಸಕ್ಕೂ ಮತ್ತು ಆರಾಧನೆಗೂ ಹೋಗಿರಿ, ಅವರೊಂದಿಗೆ ಕಲಿಯಿರಿ, ನಿಮ್ಮ ಆತ್ಮೀಕ ಆಹಾರದಲ್ಲಿ *ಆನಂದಿಸಿರಿ!*

## ಮುಕ್ತಾಯ

ನಮ್ಮನ್ನು ಪರೀಕ್ಷಿಸಿಕೊಂಡವರಾಗಿ ಅಂತ್ಯಗೊಳಿಸುವ ಪ್ರತಿಯೊಬ್ಬರೂ, "ಕ್ರೈಸ್ತನಾಗಿ ಯಾವ ವಿಧವಾದ ಪ್ರಗತಿಯನ್ನು ಮಾಡಿರುವೆನೆಂದು ಪ್ರಶ್ನಿಸಿಕೊಳ್ಳೋಣ?" ಅಭಿವೃದ್ಧಿಯ ಪಥದಲ್ಲಿ ವೃದ್ಧಿಯಾಗದ ಕ್ರೈಸ್ತರಿಗೆ ಪೌಲನು ದುಃಖಕರವಾದ ಮಾತನ್ನು ಹೇಳಿರುವನು: "ಸಹೋದರರೇ ನಾನಂತು ದೇವರಾತ್ಮನಿಂದ ನಡಿಸಿಕೊಳ್ಳುವವರಿಗೆ ತಕ್ಕಂತೆ ನಿಮ್ಮ ಸಂಗಡ ಮಾತಾಡಲಾರದೆ ಪ್ರಪಂಚಿಕರೂ ಕ್ರಿಸ್ತನ ವಿಷಯದಲ್ಲಿ ಎಳೆ ಗೂಸುಗಳು ಆಗಿರುವವರಿಗೆ ತಕ್ಕಂತೆ ನಿಮ್ಮ ಸಂಗಡ ಮಾತಾಡಬೇಕಾಯಿತು ... ನಿಮಗೆ ಹಾಲು ಕುಡಿಸಿದೆನು, ಅನ್ನ ಕೊಡಲಿಲ್ಲ, ಈಗಲಾದರು ಶಕ್ತಿಯಿಲ್ಲ" (1 ಕೊರಿಂಥ 3:1, 2).

ಕೂಸಾಗಿ ಹುಟ್ಟುವದು ಒಳ್ಳೆಯದೇ; ಕೂಸಾಗಿಯೇ ಉಳಿಯುವದು ಅಘಾತಕರವಾದದ್ದು. ನೀವು ಬೆಳಯಬೇಕಾದ ರೀತಿಯಲ್ಲಿ ವೃದ್ಧಿಯಾಗಿಲ್ಲ ಎಂದು ನೀವು ಯಥಾರ್ಥವಾಗಿ ಪರೀಕ್ಷಿಸಿಕೊಂಡರೆ, ಬೆಳೆಯುವದಕ್ಕೆ ಪ್ರಯತ್ನಿಸಿರಿ, "ಬೆಳೆದು ಎಲ್ಲಾ ವಿಷಯಗಳಲ್ಲಿಯೂ ಕ್ರಿಸ್ತನ ಐಕ್ಯವನ್ನು ಹೊಂದುತ್ತಾ ಬರಬೇಕು" (ಎಫೆಸ 4:15).

---

ಟಿಪ್ಪಣಿಗಳು

[1]ಈ ಎರಡು ವಾಕ್ಯಭಾಗಗಳಲ್ಲಿ "ಕೂಸುಗಳು" ಎಂದು ತಿಳಿಸಲಾಗಿದೆ, ಏಕೆಂದರೆ ಅವರ ಕೇಳುಗರು ವೃದ್ಧಿಯಾಗದ ಕ್ರೈಸ್ತರಾಗಿದ್ದರು. ಕೂಸಾಗಿ ಪ್ರಾರಂಭಿಸುವದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ; ಕೂಸಾಗಿಯೇ ಇರುವದು ಸಲ್ಲ! [2]ಕಳೆದ ಪಾಠದಲ್ಲಿ ಸೌಲ ಮತ್ತು ಪೌಲ ಎಂಬ ನಾಮಗಳನ್ನೇ ಬಳಸಿರುವೆನು. [3]11:26ರವರೆಗೂ ಕ್ರೈಸ್ತ ಎಂಬ ಪದ ಪ್ರಯೋಗವಾಗದೆ ಇದ್ದರೂ, ಶಿಷ್ಯರ ಬದಲು ಕೆಲವು ಸಾರಿ ಕ್ರೈಸ್ತ ಎಂಬ ಪದ ಬಳಕೆ ಮಾಡಿರುವೆನು. [4]ರಕ್ಷಿಸಲ್ಪಟ್ಟವರು ಸಭೆಗೆ ಸೇರಿ

ಸಲ್ಪಡುವರು. [5]William F. Beck, The New Testament in the Language of Today. (Emphasis mine.) 1 ತಿಮೊಥೆ 3:15ರ "ಮನೆ" ಎಂದರೆ "ಸಭಾಮಂದಿರ" ವಚನ 15ರಲ್ಲಿರುವ ವಿಷಯವು ವಚನ 4, 5, ಮತ್ತು 12ಕ್ಕೆ ಹೋಲಿಕೆಯಾಗಿದೆ. ಪೌಲನು ದೇವರ ಕುಟುಂಬವನ್ನು ಸಭಾ ನಾಯಕರ ಮನೆಗೆ ಹೋಲಿಸಿರುವನು. [6]ಧೈಹೀಕ ಕುಟುಂಬಗಳ ಕುರಿತ ಯೋಗ್ಯವಾದ ಮೆಚ್ಚುಗೆ. [7]ಅನೇಕರು ಸಭೆಗಳನ್ನು ತೊರೆಯುತ್ತಿರುವದರಿಂದ, ಅಗತ್ಯಕ್ಕೆ ತಕ್ಕ ಹಾಗೆ, ಈ ಅಂಶವನ್ನು ವಿಸ್ತರಿಸಬಹುದು. [8]ಅಪೊಸ್ತಲರ ಕೃತ್ಯಗಳು 1 ಪುಸ್ತಕದಲ್ಲಿರುವ 2:41, 47 ಟಿಪ್ಪಣೆಯನ್ನು ನೋಡಿರಿ. [9]ಸಹೋದರರು ನೀಡಬಹುದಾದ ಯಾವುದೇ ತಕರಾರನ್ನು, ಅನನೀಯನು ಸರಿಪಡಿಸಿದನು. [10]NIVಯಲ್ಲಿಯೂ "ಸೇರಿಕೋ" ಎಂಬುದಾಗಿದೆ.

[11]W. E. Vine, Merrill F. Unger, and William White, Jr., *Vine's Complete Expository Dictionary of Old and New Testament Words* (Nashville: Thomas Nelson Publishers, 1985), 334. (ಒತ್ತಿ ಹೇಳಿದ್ದು ನನ್ನದು). ಮತ್ತಾಯ 19:5ರಲ್ಲಿ "ಅಂಟಿಕೋ" ಎಂಬ ತರ್ಜುಮೆಯಾಇದೆ. ಇತರ ವಚನಗಳಿಗಾಗಿ, ಲೂಕ 15:15; ಅಪೊಸ್ಲಲರ ಕೃತ್ಯಗಳು 5:13; 10:28. [12]"ಸದಸ್ಯ" ಎಂಬ ನಾಮಾಂಕಿತವು ರೋಮಾಪುರ 12 ಮತ್ತು 1 ಕೊರಿಂಥ 12ರಲ್ಲಿರುವಂತೆ, ಪ್ರತಿಯೊಬ್ಬನನ್ನು ಧೈಹೀಕ ದೇಹಕ್ಕೆ ಹೋಲಿಸಲಾಗಿದ ಪಾದ, ಕೈ ಕಣ್ಣು, ಕಿವಿ, ಇತ್ಯಾದಿ, ಸ್ಥಳೀಯ ಸಭೆಯ ಸದಸ್ಯನಾಗಬೇಕಾದರೆ, "ಅವರ ಹೆಸರು ಹಾಜರಿ ಪುಸ್ತಕದಲ್ಲಿರ ಬೇಕೆಂದಿರುವದಿಲ್ಲ, ಆದರೆ ಅವನು ಸಭೆಯ ಕಾರ್ಯ ಕರ್ತನಾಗಿರುವನು." [13]ಒಬ್ಬನು ದೂರದಲ್ಲಿ ದೀಕ್ಷಾಸ್ನಾನ ಹೊಂದಿ, ಅವನು ಊಹಿಸುವ ಸ್ಥಳದ ಸದಸ್ಯನಾಗಿರಲು ಬಯಸುವನು. [14]ಮುಂದಿನ ಪಾಠದಲ್ಲಿರುವ 20:28ರ ಟಿಪ್ಪಣೆಯನ್ನು ನೋಡಿರಿ. [15]ವಾಕ್ಯಕ್ಯನುಗುಣವಾಗಿ ಇರುವ ಹಿರಿಯರೇ ಎಂಬುದಾಗಿರದೆ ಸಾಧ್ಯವಾದಷ್ಟು ಬೇಗ ಯೋಗ್ಯರಾದ ಹಿರಿಯರನ್ನು ಹೊಂದಿಕೊಳ್ಳಬೇಕು (ತೀತ 1:5). ಸಭೆಯಲ್ಲಿ ಹಿರಿಯರು ಇಲ್ಲದಿದ್ದರೂ, ನಾವು ಜವಾಬ್ದಾರಿವುಳ್ಳವರಾಗಿರಬೇಕು. ಸಭಾ ಸದಸ್ಯರಾಗಿದ್ದರೆ ಆ ಹೊಣೆ ಇರುತ್ತದೆ. [16]20:28ರ ಟಿಪ್ಪಣೆಯನ್ನು ನೋಡಿರಿ. [17]ಸೌಲನು ಹೊಂದದೆ ಇದ್ದ ಸಮಸ್ಯೆಯನ್ನು ನಾವುಗಳು ಹೊಂದಿರುವೆವು. ಸೌಲನ ದಿವಸಗಳಲ್ಲಿ ಯಾವುದೇ ಪಂಗಡಗಳಿರಲಿಲ್ಲ; ಆದರೆ ಈ ದಿವಸಗಳಲ್ಲಿ ಪಂಗಡಗಳಿವೆ, ಆದ್ದರಿಂದ ನಾವು ಸೇರ ಬಯಸುವ ಪಂಗಡಗಳು, ವಾಕ್ಯಕ್ಕೆ ಅನುಗುಣವಾಗಿರುವದನ್ನು ಖಚಿತ ಪಡಿಸಿಕೊಳ್ಳಿರಿ. [18]"ಸ್ಥಳೀಯ ಸಭೆಯನ್ನು ಸೇರು" ಎಂಬ ಹೆಚ್ಚಿನ ಪ್ರತಿಯನ್ನು ನೋಡಿರಿ. [19]ಯಾರನ್ನಾದರೂ, ಅಥವಾ ಎಲ್ಲರನ್ನು ಸ್ವಾಭಾವಿಕವಾಗಿ ಸಭೆಗೆ ಸೇರಿಸಿಕೊಳ್ಳಬೇಕು ಎಂಬ ತಾತ್ಪರ್ಯವಲ್ಲ ಸರಿಯಾದ ಕಾರಣವಿದ್ದರೆ ಮಾತ್ರ. ದೀಕ್ಷಾಸ್ನಾನ ಹೊಂದಿರುವವರನ್ನು ಸಾಮಾನ್ಯವಾಗಿ ಸಭೆಗೆ ಸೇರಿಸಿಕೊಳ್ಳಬಹುದು (ಅವರು ಸಭೆಗೆ ಸೇರಿಕೊಳ್ಳುವರು). [20]ಅವನ ಕಣ್ಣಿನ ಸಮಸ್ಯೆ ಬೇಗನೆ ಪರಿಹಾರವಾದದ್ದಕ್ಕೆ ಅವರಿಗೆ ಆಶ್ಚರ್ಯವಾಗಿರಬಹುದು, ಆದರೆ ಅವನನ್ನು ನೋಡಿದಾಗ ಚಕಿತಲಾಗಲಿಲ್ಲ. ದಮಸ್ಕದ ಸಭಾಮಂದಿರವು ಅವನ ಗುರಿಯಾಗಿತ್ತು (9:2).

[21]ಅಪೊಸ್ತಲರ ಕೃತ್ಯದಲ್ಲಿ ಮಾತ್ರ ಈ ವಾಖ್ಯಾನವನ್ನು ದಾಖಲುಮಾಡಲಾಗಿದೆ, 13:33ರಲ್ಲಿ ಅದರ ಒಂದು ಭಾಗವನ್ನು ಪೌಲನು ಬಳಸಿರುವನು. [22]ಕ್ರಿಸ್ತನ ತೋರ್ಪಡಿಸುವಿಕೆಯಿಲ್ಲದ ಕಾರಣದಿಂದ "ದೇವರ ಮಗನು" ಎಂಬ ಹೇಳಿಕೆಯನ್ನು ಬಳಸಿರುವದಿಲ್ಲ, ಆತನು ಪರಲೋಕದಿಂದ ಮಾತನಾಡುವವನಂತೆ ಇದ್ದನು, ಅದು "ದೇವರ ಸಾನಿಧ್ಯದಂತಿತ್ತು." [23]ಪೌಲನು ತನ್ನ ಪತ್ರಿಕೆಯಲ್ಲಿ 15ಸಾರಿ ಈ ವ್ಯಾಖ್ಯಾನವನ್ನು ಬಳಸಿರುವನು. [24]ಅಪೊಸ್ತಲರ ಕೃತ್ಯಗಳು 13:6-14; 17:1-3, 10, ಇದಕ್ಕನುಗುಣವಾಗಿ ಪೌಲನು ಚರ್ಚೆಯ ಮಾದರಿಯಾಗಿರುವನು. [25]ಹೋಲಿಸು 6:9. [26]ಆ ಸ್ಥಳವು ಸಭಾಮಂದಿರದ ಸ್ಥಳವಾಗಿದ್ದರೆ, ಅವನು ಸಭಾಮಂದಿರಕ್ಕೆ ಹೋದನು, ಅದು ಸಾಮಾನ್ಯವಾಗಿತ್ತು. ಅದನ್ನು ಹೊರತು ಪಡಿಸಿರುವ ವಿಷಯಕ್ಕಾಗಿ ಅಪೊಸ್ತಲರ ಕೃತ್ಯಗಳು 16ನ್ನು ನೋಡಿರಿ. [27]ಅಪೊಸ್ತಲರು ಮಾಡುತ್ತಿದ ಅದ್ಭುತ, ಮಹತ್ಕಾರ್ಯಗಳನ್ನು ಮಾಡುವದಕ್ಕೆ, ಅಪೊಸ್ತಲನು ಪವಿತ್ರಾತ್ಮವರವನ್ನು ಒಂದು ನಿಗದಿತ ಸಮಯದಲ್ಲಿ ಹೊಂದಿರಬಹುದು (ಅಥವಾ ಸಮಾನವಾದ, 2 ಕೊರಿಂಥ 12:12) ಅವನು ಕೈಯನ್ನು ಕ್ರೈಸ್ತರ ಮೇಲೆ ಇಡುವಾಗ, ಅವರು ವರಗಳನ್ನು ಪಡೆಯುತ್ತಿದ್ದರು (ಅಪೊಸ್ತಲರ ಕೃತ್ಯಗಳು 19:1-7). ಸೌಲನು ಪವಿತ್ರಾತ್ಮವರವನ್ನು ಪಡೆದ ನಿರ್ದಿಷ್ಟವಾದ ಸಮಯದ ಕುರಿತು ಲೂಕನು ತಿಳಿಸಿರುವದಿಲ್ಲ (ಅಥವಾ ಇದಕ್ಕೆ ಸಮಾನವಾದದ್ದು), ಅಪೊಸ್ತಲರ ಕೃತ್ಯಗಳು 9ರ ಘಟನೆಯಲ್ಲಿರಬಹುದು ಅಥವಾ ನಂತರ ದಮಸ್ಕದ ಸಭಾಮಂದಿರದಲ್ಲಿ ಸೌಲನು ಪ್ರೇರಿತನಾಗಿ ಮಾತನಾಡಿರಬಹುದು, "ಯೆಹೂದ್ಯರನ್ನು ಉತ್ತರವಿಲ್ಲದವರಾಗಿ ಮಾಡಿರ ಬಹುದು" ಅದನ್ನು ನಾವು ನಿಶ್ಚಯವಾಗಿ ತಿಳಿದಿರುವದಿಲ್ಲ. [28]Rick Atchley, "A Man Without a Congregation," Sermon preached at the Southern Hills church of Christ, Abilene, Texas, on 22 September 1985. [29]ಅವನು ಆತ್ಮವನ್ನು ಹೊಂದಿದ್ದನು ಎಂಬುದು ಇನ್ನೊಂದು ವಿಷಯ. [30]ಪೌಲನು ಕ್ರೈಸ್ತನಾದ ಬಗ್ಗೆ ಗಲಾತ್ಯ

1:11-24ರಲ್ಲಿ ತಿಳಿಸಲಾಗಿದೆ.

[31]ನಕ್ಷೆಯನ್ನು ನೋಡಿರಿ, "ಸೌಲನ ಪ್ರಥಮ ಪ್ರಯಾಣ." [32]ಗಲಾತ್ಯ 1:17ಬಿ ಈ ವಚನವು 9:22 ಮತ್ತು 9:23ರ ನಡುವೆ ಹೊಂದುತ್ತದೆ, ಅಥವಾ ಬೇರೆಸ್ಥಳದಲ್ಲಿಯೂ ಹೊಂದುತ್ತದೆ. [33]ಸೀನಾಯಿ ಬೆಟ್ಟವು ಅರೇಬಿಯದ ದಕ್ಷಿಣ ಒಳನಾಡಿನಲ್ಲಿತ್ತು ಎಂಬುದು ಕೆಲವರ ಅಭಿಪ್ರಾಯ (ಗಲಾತ್ಯ 4:25). ಮೋಶೆ ಮತ್ತು ಎಲಿಯೂ ಅಲ್ಲಿಗೆ ಹೋದಂತೆ, ಪೌಲನು ಸಹ ಅಲ್ಲಿಗೆ ಯಾತ್ರೆ ಹೋದನು ಎಂಬುದು ಅಭಿಪ್ರಾಯವಾಗಿದೆ, ಆಯಾತ್ರೆಯ ಬಗ್ಗೆ ಸಾಕ್ಷಾಧಾರಗಳಿಲ್ಲ. [34]ಸುವಾರ್ತೆಗಳಲ್ಲಿ ತಿಳಿಸುವ ಮೊದಲೇ, ಪೌಲನು ಯೇಸುವಿನ ಮಾರ್ಗದರ್ಶನದ, "ಕರ್ತನ ಬೋಜನದ" ವಿಷಯವನ್ನು ತಿಳಿಸಿರುವನು. [35]ಆದ್ದರಿಂದ ಪೌಲನು ಇತರೆ ಅಪೊಸ್ತಲರಿಗಿಂತ, ಕೆಳಮಟ್ಟದವನಾಗಿರಲಿಲ್ಲ (2 ಕೊರಿಂಥ 12:11). [36]ಯೋಹಾನ 1:42.




1. ಸೌಲನು ಯೆರೂಸಲೇಮನಿಂದ ಹೊರಟನು ದಮಸ್ಕಕ್ಕೆ , ಕ್ರೈಸ್ತರ ಮೇಲೆ ಕೌದ್ರನಾಗಿ "ಅವರನ್ನು ಸಂಹರಿಸಲು ಹೊರಟನು" (9:1, 2; 22:4, 5; 26:10-12).
2. ದಮಸ್ಕದ ದಾರಿಯಲ್ಲಿ ಯೇಸುವನ್ನು ನೋಡಿ , ಪಟ್ಟಣವನ್ನು ಸೇರಿ ಅನನೀಯನಿಂದ ದೀಕ್ಷಾಸ್ನಾನ ಪಡೆಯಲು ಆದೇಶ ಹೊಂದಿದನು (9:18; 22:16). ತಕ್ಷಣವೇ ಪ್ರಸಂಗಿಸಲು ಆರಂಭಿಸಿದನು (9:20-22).
3. ಸೌಲನು ಅರಬಸ್ತಾನಕ್ಕೆ ಹೋದನು (ಗಲಾತ್ಯ 1:17) ನಂತರ ದಮಸ್ಕಕ್ಕೆ ಹಿಂದಿರುಗಿದನು. ಯೆಹೂದ್ಯರಿಂದ ತಪ್ಪಿಸಿಕೊಳ್ಳಲು, ರಾತ್ರಿ ವೇಳೆಯಲ್ಲಿ ಪಟ್ಟಣವನ್ನು ತೊರೆದು ಬುಟ್ಟಿಯ ಮೂಲಕವಾಗಿ ತಪ್ಪಿಸಿಕೊಂಡನು (ಅಪೊಸ್ತಲರ ಕೃತ್ಯಗಳ 9:23-25); ನಂತರ ಯೆರೂಸಲೇಮಿಗೆ ಹೋದನು ಅಲ್ಲಿ ಬಾರ್ನಬನಿಂದ ಸ್ವೀಕರಿಸಿದವನಾಗಿ, ಪೇತ್ರ ಯಾಕೋಬರನ್ನು ಸಂಧಿಸಿದನು (ಅಪೊಸ್ತಲರ ಕೃತ್ಯಗಳು 9:26-28; ಗಲಾತ್ಯ 1:18, 19).
4. ಪುನಃ ಯೆಹೂದ್ಯರ ದ್ವೇಷಕ್ಕೊಳಗಾಗಿ ಸೌಲ/ಪೌಲ ಕೈಸರೈಯಕ್ಕೆ ಕೊಂಡೊಯಲ್ಪಟ್ಟನು ಸಹೋದರರಿಂದ ತಾರ್ಸ ದಲ್ಲಿನ ಅವನ ಮನೆಗೆ ಕಳುಹಿಸಲ್ಪಟ್ಟನು (9:29, 30).
5. ಏಳು ವರ್ಷಗಳ ಕಾಲ ಮನೆಯಲ್ಲಿದ್ದುಕೊಂಡು, ಕಿಲಿಕ್ಯದಲ್ಲಿ ಮತ್ತು ಸಿರಿಯದಲ್ಲಿ ಪ್ರಸಂಗಿಸಿದನು (ಗಲಾತ್ಯ 1:21). ಬಾರ್ನಬನು ಸೀಲನನ್ನು ತಾರ್ಸದಿಂದ ಕರೆತಂದನು ಅಂತಿಯೋಕ್ಯಕ್ಕೆ ಅವನು ಮತ್ತು ಸೌಲನು ಒಂದು ವರ್ಷಕಾಲ ಕೆಲಸ ಮಾಡಿದರು (ಅಪೊಸ್ತಲರ ಕೃತ್ಯಗಳು 11:22-26).

**ಸೌಲನ ಪ್ರಥಮ ಪ್ರಯಾಣಗಳು**